ಸಂಯುಕ್ತ ಕರ್ನಾಟಕ

# ಎಸ್‌ಬಿಎಂ ಜೈನ್ ತಂಡಕ್ಕೆ ಪ್ರಶ



**ಬೆಂಗಳೂರು, ಜ. 22;** ಕೆಎಸ್‌ಸಿಎ ಆಶ್ರಯದಲ್ಲಿ ಹೆರಾನ್ಸ್ ಕ್ರಿಕೆಟ್ ಕ್ಲಬ್ ಹಮ್ಮಿಕೊಂಡಿದ್ದ ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ಸ್ ಅಂತರ ಕಾಲೇಜು ಕ್ರಿಕೆಟ್ ಟೂರ್ನಿಯಲ್ಲಿ ಎಸ್‌ಬಿಎಂ ಜೈನ್ ಕಾಲೇಜು ತಂಡ ಚಾಂಪಿಯನ್ ಎನಿಸಿತು. ವೈಎಂಸಿಎ ಅಂಗಣದಲ್ಲಿ ನಡೆದ ಫೈನಲ್‌ನಲ್ಲಿ 24.2 ಓವರ್‌ಗಳಲ್ಲಿ 125 ರನ್‌ಗೆ ಆಲೌಟ್ ಆದ ಪ್ರೆಸಿಡೆನ್ಸಿ ಕಾಲೇಜಿನ ವಿರುದ್ಧ 22.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 129 ರನ್ ಗಳಿಸಿದ ಎಸ್‌ಬಿಎಂ ಜಯದ ನಗೆ ಬೀರಿತು.

ಟೂರ್ನಿಯ ಅತ್ಯುತ್ತಮ ಬ್ಯಾಟ್ಸ್‌ಮನ್ ಹಿರಿಮೆ ಎಸ್‌ಬಿಎಂನ ಲಾಲ್ ಸಚಿನ್ ಭಾಜನವಾದರು. ಪ್ರೆಸಿಡೆನ್ಸಿಯ ತಿಮ್ಮಯ್ಯ ಅತ್ಯುತ್ತಮ ಬೌಲರ್ ಎನಿಸಿದರು. ಅಂತೆಯೇ ಪ್ರೆಸಿಡೆನ್ಸಿಯ ರಕ್ಷಿತ್ ಅತ್ಯುತ್ತಮ ಆಲ್‌ರೌಂಡರ್ ಆಗಿಯೂ ಲಾಲ್ ಸಚಿನ್ ಟೂರ್ನಿ ಶ್ರೇಷ್ಠ ಪ್ರಶಸ್ತಿಗೂ ಅರ್ಹರೆನಿಸಿದರು.